**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816 /2021**

**ಪ್ರಾಸಾಃ- 33 ಚಾಸಾಃ- 47**

| | | |
|---|---|---|
| ಸಾಕ್ಷಿಯ ಹೆಸರು | : | ಸಿ.ಅಂಜಿನಿ ರೆಡ್ಡಿ |
| ತಂದೆಯ ಹೆಸರು | : | ಸಿ.ಲಕ್ಷ್ಮಿ ರೆಡ್ಡಿ |
| ವಯಸ್ಸು | : | 54 ವರ್ಷ |
| ವೃತ್ತಿ | : | ಎ ಆರ್ ಎಸ್ ಐ, ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 9.9.2025**
**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 2021 ರಲ್ಲಿ ಡಿ ಆರ್ ಕೇಂದ್ರ ಸ್ಥಾನದಲ್ಲಿ ಮುಖ್ಯ ಪೇದೆಯೆಂದು ಕರ್ತವ್ಯ ನಿರ್ವಹಿಸಿದ್ದೇನೆ.

ಚಾಸಾ 52 ಮತ್ತು 53 ರವರು ನನ್ನ ಮೇಲಾಧಿಕಾರಿಗಳು. ನಾನು ಈಗ ನೋಡುತ್ತಿರುವ ನಿಪಿ-72, 74, 86, 87, 90, 37, 93, 8, 56 ಪಂಚನಾಮೆಗಳನ್ನು ಮಾಡುವ ಸಮಯದಲ್ಲಿ ಹಾಜರು ಇದ್ದು ಸದರಿ ಪಂಚನಾಮೆಯ ಪ್ರಕ್ರಿಯೆಯ ವೀಡಿಯೋವನ್ನು ಮಾಡಿದ್ದೆ. ನಾನು ಸದರಿ ಪಂಚನಾಮೆಗಳ ಸಮಯದಲ್ಲಿ ತೆಗೆದ ವೀಡಿಯೋವನ್ನು ಸಿಡಿಗೆ ಕಾಪಿ ಮಾಡಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ನಾನು ನೋಡುತ್ತಿರುವ ನಿಪಿ-80, 96 ರಿಂದ 100 ಸಿಡಿಗಳನ್ನು ನಾನು ತನಿಖಾಧಿಕಾರಿಗೆ ಕೊಟ್ಟಿದ್ದೆ. ಅದರಲ್ಲಿ ಇರುವಂತೆ ನಾನು ಪಂಚನಾಮೆಗಳ ಸಮಯದಲ್ಲಿ ವೀಡಿಯೋ ಮಾಡಿದ್ದೆ. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ಅಡಿಯಲ್ಲಿ ಎರಡು ಪ್ರಮಾಣ ಪತ್ರಗಳನ್ನು ನೀಡಿದ್ದೇನೆ. ಸದರಿ ಪ್ರಮಾಣ ಪತ್ರಗಳನ್ನು ನಿಪಿ-109 ಮತ್ತು 110 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-109(ಎ) ಮತ್ತು ನಿಪಿ-110(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ನಾನು ನೀಡಿದ ಸರ್ಟಿಫಿಕೇಟ್ ನಲ್ಲಿ ವೀಡಿಯೋ ತೆಗೆದ ಕ್ಯಾಮೆರಾ ಯಾವ ಕಂಪನಿಯದು ಎಂದು ನಮೂದಿಸಿಲ್ಲ ಎಂದರೆ ಸರಿ. ನನಗೆ ವೀಡಿಯೋಗ್ರಫಿ ಬಗ್ಗೆ ಟ್ರೈನಿಂಗ್ ಆಗಿತ್ತು. ಈ ಬಗ್ಗೆ ಸರ್ಟಿಫಿಕೇಟ್ ಹಾಜರು ಪಡಿಸಿಲ್ಲ. ನನಗೆ ಪಂಚನಾಮೆ ಸಮಯದಲ್ಲಿ ಹಾಜರು ಇದ್ದು ವೀಡಿಯೋ ತೆಗೆಯಲು ಮೇಲಾಧಿಕಾರಿಗಳು ಲಿಖಿತ ನೋಟೀಸ್‌ನ್ನು ಕೊಟ್ಟಿಲ್ಲ. ನಾನು ನಿಪಿ-72, 74, 86, 87, 90, 37, 93, 8, 56 ರಂತೆ ಪಂಚನಾಮೆಗಳನ್ನು ಮಾಡುವ ಸಮಯದಲ್ಲಿ ಹಾಜರು ಇದ್ದೆ ಮತ್ತು ಆ ಸಮಯದಲ್ಲಿ ನಾನು ವೀಡಿಯೋಗ್ರಫಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಸಮಯದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಿಪಿ-109 ಮತ್ತು 110 ರಂತೆ ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವೀಡಿಯೋವನ್ನು ಪಂಚನಾಮೆ ಸಮಯದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816 /2021**

**ಪ್ರಾಸಾಃ- 34 ಚಾಸಾಃ- 50**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ್ |
| ತಂದೆಯ ಹೆಸರು | : | ತಿರುಕಪ್ಪ |
| ವಯಸ್ಸು | : | 39 ವರ್ಷ |
| ವೃತ್ತಿ | : | ಹೆಚ್ ಸಿ, ಕೊಟ್ಟೂರು ಪೋಲೀಸ್ ಠಾಣೆ |
| ವಾಸಸ್ಥಳ | : | ಕೊಟ್ಟೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 9.9.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಸಿ ಟಿ ಡಿ ವೈ ಎಸ್ ಪಿ ಆಫೀಸ್‌ನಲ್ಲಿ 15-3-2021 ರಿಂದ 11-5-2022 ರವರೆಗೆ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 10-8-2021 ರಂದು ನಾನು ಸಿ ಟಿ ಡಿ ಎಸ್ ಪಿ ಕಚೇರಿಯಲ್ಲಿ ಚಾಸಾ 15 ರಿಂದ 26 ರವರ ಹೇಳಿಕೆಯನ್ನು ಪಡೆಯುವ ಸಮಯದಲ್ಲಿ ಹಾಜರು ಇದ್ದು ಅವರು ನೀಡಿದ ಹೇಳಿಕೆಯ ವೀಡಿಯೋವನ್ನು ಮಾಡಿಕೊಂಡಿದ್ದೆ. ನಂತರ ಸದರಿ ವೀಡಿಯೋವನ್ನು ಸಿಡಿಗಳಿಗೆ ಕಾಪಿ ಮಾಡಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಸದರಿ ಸಿಡಿಗಳನ್ನು ನೋಡುತ್ತಿದ್ದು ಅವುಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಅವುಗಳಲ್ಲಿ ಒಂದನ್ನು ನಿಪಿ-111 ಎಂದು ಗುರುತಿಸಲಾಯಿತು. ಉಳಿದ ಸಿಡಿಗಳನ್ನು ಈಗಾಗಲೇ ನಿಪಿ-23, 30 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ಅಡಿಯಲ್ಲಿ ಒಂದು ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ-112 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-112(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದ:</u>**

ನಾನು ನೀಡಿದ ಸರ್ಟಿಫಿಕೇಟ್‌ನಲ್ಲಿ ವೀಡಿಯೋ ತೆಗೆದ ಕ್ಯಾಮೆರಾ ಯಾವ ಕಂಪನಿಯದು ಎಂದು ನಮೂದಿಸಿಲ್ಲ ಎಂದರೆ ಸರಿ. ನನಗೆ ವೀಡಿಯೋಗ್ರಫಿ ಬಗ್ಗೆ ಟ್ರೈನಿಂಗ್ ಆಗಿಲ್ಲ. ವೀಡಿಯೋಗ್ರಫಿಯಲ್ಲಿ ನಾನು ಯಾವುದೇ ಸರ್ಟಿಫಿಕೇಟ್ ಪಡೆದಿಲ್ಲ. ನನಗೆ ಸಾಕ್ಷಿದಾರರ ಹೇಳಿಕೆ ಸಮಯದಲ್ಲಿ ಹಾಜರು ಇದ್ದು ವೀಡಿಯೋ ತೆಗೆಯಲು ಮೇಲಾಧಿಕಾರಿಗಳು ಲಿಖಿತ ನೋಟೀಸ್‌ನ್ನು ಕೊಟ್ಟಿಲ್ಲ. ನಾನು ಚಾಸಾ 15 ರಿಂದ 26 ರವರ ಹೇಳಿಕೆಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಹಾಜರು ಇದ್ದೆ ಮತ್ತು ಆ ಸಮಯದಲ್ಲಿ ನಾನು ವೀಡಿಯೋಗ್ರಫಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಸಮಯದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಿಪಿ-112 ರಂತೆ ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ವೀಡಿಯೋಗ್ರಫಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**